ಚಿಕ್ಕಪೇಟೆ ವಿಧಾನ ಸಭಾ ಕ್ಷೇತ್ರದ ತೊಂಟೇಗೌಡ ನಗರ ವಾರ್ಡ್-145 ರಲ್ಲಿ ವಾರ್ಡ್ ಸಮಿತಿ ಸಭೆಯನ್ನು ಶ್ರೀಮತಿ.ಲಕ್ಷ್ಮೀದೇವಿ ಉಪ ಆಯುಕ್ತರು ಕಂದಾಯ(ದಕ್ಷಿಣ), ನೋಡಲ್ ಅಧಿಕಾರಿ ಹಾಗೂ ವಾರ್ಡ್ ಸಮಿತಿ ಅಧ್ಯಕ್ಷರ ಅಪ್ಪಣೆ ಮೇರೆಗೆ ದಿನಾಂಕ:-19.12.2020 ರಂದು ಶನಿವಾರ ಮಧ್ಯಾಹ್ನ 3.00 ಗಂಟೆಗೆ ವಾರ್ಡ್ ಸಮಿಟಿ ಸಭೆಯನ್ನು ಕರೆಯಲಾಗಿದ್ದು ವಾರ್ಡ್ ಕುಂದು ಕೊರತೆಗಳ ಬಗ್ಗೆ ಚರ್ಚಿಸಲು ಸಭೆಗೆ ಆಗಮಿಸಿರುವ ಸಮಿತಿ ಸದಸ್ಯರಿಗೆ ಆಹ್ವಾನ ನೀಡಿದ್ದು ಸಭೆಗೆ ಹಾಜರಾಗಿರುವ ಸದಸ್ಯರಿಗೆ ಸ್ವಾಗತ ಕೋರುತ್ತಾ ಸಭೆಯ ವಾರ್ಡ್ ಸಮಿತಿ ಅಧ್ಯಕ್ಷರಾದ ಶ್ರೀಮತಿ.ಲಕ್ಷ್ಮೀದೇವಿ ರವರ ಅಧ್ಯಕ್ಷತೆಯೊಂದಿಗೆ ಸಭೆಯನ್ನು ನಡೆಸಲಾಯಿತು.

| ಹಾಜರಿದ್ದವರು | ಗೈರು ಹಾಜರಾತಿ |
|---|---|
| 1) ಉಪ ಆಯುಕ್ತರು (ದಕ್ಷಿಣ) ವಾರ್ಡ್-145 ನೋಡಲ್ ಅಧಿಕಾರಿ.<br>2) ವಾರ್ಡ್ 145 ಕ್ಕೆ ಸಂಬಂಧಪಟ್ಟಂತ AE & HI.<br>3) Garbage Contractor.<br>4) ವಿನಾಯಕ ಬಳಗದ ಸಂಘದವರು. | 1) Traffic & Police Department<br>2) Forest, BWSSB, BESCOM, Horticulture & Revenue. |

** ** **

1. ಈ ಹಿಂದಿನ ಸಭೆಯಲ್ಲಿ ಗುಪ್ತ ಲೇಔಟ್ ರಸ್ತೆಗಳಲ್ಲಿ Sweeping ಕಾರ್ಯದ ಬಗ್ಗೆ ದೂರು ನೀಡಿದ್ದರು. ಅದರಂತೆ ಅಲ್ಲಿನ ಪೌರಕಾರ್ಮಿಕರನ್ನು ಬದಲಾಹಿಸಲಾಗಿತ್ತು. ಪ್ರಸ್ತುತ ಆ ವ್ಯಾಪ್ತಿಯಲ್ಲಿ ಈಗ ಒಳ್ಳೆ ರೀತಿಯಲ್ಲಿ ಸ್ವಚ್ಛತಾ ಕಾರ್ಯ ನಡೆಯುತ್ತಿದೆ ಎಂದು ಅಲ್ಲಿನ ಸಾರ್ವಜನಿಕರು ತಿಳಿಸಿರುತ್ತಾರೆ.
2. ಅರಣ್ಯ ವಿಭಾಗದ. ವತಿಯಿಂದ ವಾರ್ಡ್ ವ್ಯಾಪ್ತಿಯ ಮರಗಳಲ್ಲಿನ ಸತ್ವರಹಿತ ರಂಬೆಗಳನ್ನು ತೆರವುಗೊಳಿಸುವ ಮುನ್ನ ಬೆಸ್ಕಾಂ ಅಧಿಕಾರಿಗಳೊಂದಿಗೆ ಚರ್ಚಿಸಿ ಕಾರ್ಯ ಯೋಜನೆಗೆ ಕ್ರಮವಹಿಸುವುದು.
3. ಆಟೋ ಟಿಪ್ಪರ್‌ಗಳು ಪ್ರತಿನಿತ್ಯ ನಿಲ್ಲುವ ಜಾಗವನ್ನು ಬದಲಾಯಿಸುವುದರಿಂದ ಸಾರ್ವಜನಿಕರು ನಿರಂತರ ಕಸ ಎಸೆಯುತ್ತಿರುವುದರಿಂದ ಆಗುತ್ತಿರುವ Black Spot ಗಳನ್ನು ತಡೆಗಟ್ಟುವುದು.
4. ವಾರ್ಡ್ ಮಟ್ಟದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಪೌರಕಾರ್ಮಿಕರಿಗೆ (Gloves,Sanitizers, Uniform, Mask, Apron & Shoes) ನೀಡುತ್ತಿರುವ ಸೌಲಭ್ಯಗಳ ಬಗ್ಗೆ ಮಾಹಿತಿಯನ್ನು ಸಂಬಂಧಪಟ್ಟ AEE ಘನತ್ಯಾಜ್ಯರವರು ತಹಲ್‌ವರೆಗೂ ನೀಡಿರುವುದಿಲ್ಲ.
5. ಕಸದ ಗಾಡಿಯಲ್ಲಿ ಹಸಿ ಮತ್ತು ಒಣ ತ್ಯಾಜ್ಯ ವಿಂಗಡಣೆ ಬಗ್ಗೆ Announcement ನೀಡಲು ಈಗಾಗಲೇ ಹಲವು ಬಾರಿ ಸಭೆಗಳಲ್ಲಿ ಸೂಚಿಸಿದ್ದರು ಈವರೆಗೂ ಯಾವುದೇ ರೀತಿ ಕ್ರಮವಹಿಸಿರುವುದಿಲ್ಲ. ಆದ್ದರಿಂದ ಕೂಡಲೇ ಎಲ್ಲಾ ಆಟೋಗಳಲ್ಲಿ ತ್ಯಾಜ್ಯ ವಿಂಗಡಣೆ ಬಗ್ಗೆ Announcement ನೀಡಲು ಕ್ರಮವಹಿಸುವುದು.

ಮು.ತಿ.ನೋ

Scanned with CamScanner

6. ಪ್ರತಿನಿತ್ಯ ತ್ಯಾಜ್ಯ ಸ್ವೀಕರಿಸುವ ವೇಳೆಯಲ್ಲಿ ಹಸಿ ಮತ್ತು ಒಣ ತ್ಯಾಜ್ಯ ಬೇರ್ಪಡಿಸಿ ನೀಡಿದರೆ ಮಾತ್ರ ಪಡೆಯುವುದು. ಈ ಒಂದು ಕಾರ್ಯಚರಣೆ ಆಡುಗೋಡಿ ವ್ಯಾಪ್ತಿಯಲ್ಲಿ ಬಹಳ ಉತ್ತಮ ರೀತಿಯಲ್ಲಿ ನಡೆಯುತ್ತಿರುವುದು ಕಂಡು ಬಂದಿರುತ್ತದೆ. ಆದ್ದರಿಂದ ವಾರ್ಡ್-145 ಎಲ್ಲಾ ರಸ್ತೆಗಳಲ್ಲೂ ಅನುಸರಿಸುವಂತೆ ಸೂಚಿಸಲಾಯಿತ್ತು.
7. ಬಿ.ಎಂ.ಟಿ.ಸಿ. ಬಸ್ ನಿಲ್ದಾಣದ ಸಮೀಪ ಇರುವ ಖಾಲಿ ಜಾಗವನ್ನು Dry Waste Spot ಮಾಡಲು ಮುಂದಿನ ಕ್ರಮವಹಿಸಲು ಸೂಚಿಸಲಾಯಿತ್ತು.
8. ಈ ಹಿಂದಿನ ಸಭೆಗಳಲ್ಲಿ ಶಾಂತಿನಗರ ಬಸ್ ನಿಲ್ದಾಣದ ಮರದ ಕೊಂಬೆಗಳು ರಸ್ತೆ ಕಡೆಗೆ ಬಾಗುತ್ತಿರುವುದರಿಂದ ಸಾರ್ವಜನಿಕರಿಗೆ ತೊಂದರೆಯಾಗುತ್ತಿರುವ ಬಗ್ಗೆ ದೂರು ನೀಡಲಾಗಿತ್ತು. ಅದರಂತೆ Forest ಸಿಬ್ಬಂದಿರವರು ನಿಯಮಾನುಸಾರ ಕ್ರಮವಹಿಸಿ ಸ್ಥಳವನ್ನು ಸ್ವಚ್ಛಗೊಳಿಸಿರುತ್ತಾರೆ.
9. ವಿಲ್ಸನ್ ಗಾರ್ಡ್‌ನ್ ಸ್ಮಶಾನ ಸ್ವಚ್ಛಗೊಳಿಸುವುದರ ಬಗ್ಗೆ AEE ಹಾಗೂ HI ರವರು ಕಾರ್ಯ ಯೋಜನೆ ರೂಪಿಸುವ ಮೊದಲು Snake Catchers ರವನ್ನು ಕರೆಸಿ ಸ್ಥಳಕ್ಕೆ ಔಷಧಿ ಹೊಡೆಸಿ ನಂತರ ಕಾರ್ಯಚರಣೆಗೆ ಕ್ರಮವಹಿಸಲು ಸೂಚಿಸಲಾಯಿತು.
10. ಮಾನ್ಯ ಆಯುಕ್ತರು ರವರು ಸೂಚಿಸಿರುವಂತೆ ವಾರ್ಡ್‌ಗಳಲ್ಲಿ ರಸ್ತೆವಾರು ಪರಿಶೀಲಿಸಿ ಶೌಚಾಲಯಗಳ ಇರುವಿಕೆ ಹಾಗೂ ಸುಸ್ಥಿತಿಯಲ್ಲಿ ಇರುವ ಬಗ್ಗೆ ಮಾಹಿತಿಯನ್ನು ನೀಡಲು ಈ ಹಿಂದಿನ ಸಭೆಯಲ್ಲಿ ತಿಳಿಸಲಾಗಿತ್ತು, ಆದರೆ ಈವರೆಗೂ ಮಾಹಿತಿ ನೀಡಿರುವುದಿಲ್ಲ. ಆದ್ದರಿಂದ ಮುಂದಿನ 2 ದಿನಗಳಲ್ಲಿ ಮಾಹಿತಿ ನೀಡುವುದು.
11. ಈ ಹಿಂದಿನ ಸಭೆಯಲ್ಲಿ ಪೌರಕಾರ್ಮಿಕರ ವಾಸ ಸ್ಥಳದ ಬಗ್ಗೆ ಮಾಹಿತಿ ನೀಡಲು ಸೂಚಿಸಲಾಗಿತ್ತು, ಈವರೆಗೂ ನೀಡಿರುವುದಿಲ್ಲ. ಇದರಿಂದಾಗಿ ಪೌರಕಾರ್ಮಿಕರಿಗೆ ಸಂಚಾರ ಮಾಡಲು ತೊಂದರೆಯಾಗುವುದರಿಂದ ಮಾಹಿತಿಯನ್ನು ನೀಡಲು ಸೂಚಿಸಲಾಯಿತು.
12. ಬಿ.ಟಿ.ಎಸ್. ರೋಡ್‌ನಲ್ಲಿ ಶೌಚಾಲಯದ ವ್ಯವಸ್ಥೆ ಇಲ್ಲದಿರುವ ಕಾರಣ ಆ ವ್ಯಾಪ್ತಿಯಲ್ಲಿ ಶೌಚಾಲಯದ ವ್ಯವಸ್ಥೆ ಮಾಡಲು ಸೂಕ್ತ ಕ್ರಮವಹಿಸುವುದು.
13. ಪ್ರಾಥಮಿಕ ಆರೋಗ್ಯ ಕೇಂದ್ರ ವಾಡ್-145 ಕ್ಕೆ ಗ್ರೂಪ್-ಡಿ ಸಿಬ್ಬಂದಿ ಬೇಕಾಗಿರುವುದೆಂದು ಡಾ.ಮಹೇಶ್ವರಿ.ಎಮ್(MO) ರವರು ಅರ್ಜಿ ನೀಡಿರುತ್ತಾರೆ.-ಪರಿಶೀಲಿಸಿ ಕ್ರಮವಹಿಸುವುದಾಗಿ ತಿಳಿಸಲಾಯಿತು.
14. ಕೆನರಾ ಬ್ಯಾಂಕ್ ಹತ್ತಿರದ Pot Holes ಗಳನ್ನು ಮುಚ್ಚಲು ಸೂಕ್ತ ಕ್ರಮ ವಹಿಸುವುದು.
15. 13ನೇ ಕ್ರಾಸ್, ಹೊಸೂರು ರಸ್ತೆಯ ಉದ್ಯಾನವನವನ್ನು ಬಹಳ ಅಚ್ಚುಕಟ್ಟಾಗಿ ನಿರ್ವಹಿಸಿರುತ್ತಾರೆ.
16. ಹೊಸೂರು ರಸ್ತೆಯ ಸ್ಕೈ-ವಾಕ್ ನಿರ್ವಹಣೆ ಬಹಳ ಕೆಟ್ಟದಾಗಿದ್ದು ಕೂಡಲೇ ಸಂಬಂದಪಟ್ಟ ಅಧಿಕಾರಿರವರು ಸೂಕ್ತ ಕ್ರಮವಹಿಸುವುದು.-ಸ್ಥಳ ತಪಾಸಣೆಗಾಗಿ ಕಾಯ್ದಿರಿಸಿದೆ.
17. ಹರಿಲಕ್ಷ್ಮೀ ಥಿಯೇಟರ್ ನಿವಾಸಿಗರು ಈ ಹಿಂದಿನ ಸಭೆಯಲ್ಲಿ ತಿಳಿಸಿರುವಂತೆ ಕಟ್ಟಡವು ಪಾಳು ಬಿದ್ದಿದ್ದು ಅಲ್ಲಿ ಅಕ್ರಮ ಹಾಗೂ ಅನೈತಿಕ ಚಟುವಟಿಕೆಗಳು ನಡೆಯುತ್ತಿರುವುದರ ಬಗ್ಗೆ ಪೋಲಿಸ್ ಇಲಾಖೆಗೆ ದೂರು ನೀಡಲು ಕಾರ್ಯದರ್ಶಿಯವರಿಗೆ ಮತ್ತೊಮ್ಮೆ ಸೂಚಿಸಲಾಯಿತು.

ಮು.ತಿ.ನೋ

Scanned with CamScanner

18. ಹರಿಲಕ್ಷ್ಮೀ ಥಿಯೇಟರ್ ಸ್ವತ್ತಿಗೆ HI ರವರಿಗೆ ನೋಟಿಸ್ ನೀಡಲು ಸೂಚಿಸಲಾಗಿತ್ತು. ಆದರೆ ಯಾವುದೇ ಕ್ರಮವಹಿಸದಿರುವುದು ಕಂಡು ಬಂದಿದ್ದು ಮುಂದಿನ 3 ದಿನದೊಳಗೆ ಈ ವಿಷಯದ ಬಗ್ಗೆ ಸಮಜಾಯಿಷಿ ನೀಡುವುದು.
19. ಈಗಾಗಲೇ ಹಿಂದಿನ ಸಭೆಯಲ್ಲಿ ಟ್ರಾಫಿಕ್ ಪೋಲಿಸ್ ಇಲಾಖೆಯವರಿಗೆ ಅನೇಕ ವಾಹನಗಳು ರಸ್ತೆಯ ಇಕ್ಕೆಲಗಳಲ್ಲಿ ನಿಂತಿರುವುದರಿಂದ ವಾಹನ ಸಂಚಾರ ಹಾಗೂ ಸಾರ್ವಜನಿಕ ಓಡಾಟಕ್ಕೆ ತೊಂದರೆಯಾಗಿ ಅಪಘಾತಕ್ಕೆ ಕಾರಣವಾಗುವುದರಿಂದ ಸೂಕ್ತ ಕ್ರಮವಹಿಸಲು ಸೂಚಿಸಲಾಗಿತ್ತು. ಈವರೆಗೂ ಯಾವುದೇ ಬದಲಾವಣೆ ಕಂಡು ಬಂದಿರುವುದಿಲ್ಲ. ಆದ್ದರಿಂದ ಟ್ರಾಫಿಕ್ ಪೋಲಿಸ್ ಇಲಾಖೆಗೆ ಪತ್ರ ಬರೆಯಲು ಕಾರ್ಯದರ್ಶಿಯವರಿಗೆ ಸೂಚಿಸಲಾಯಿತು.

ಕಾರ್ಯದರ್ಶಿ ಹಾಗೂ
ಸಹಾಯಕ ಅಭಿಯಂತರರು
ವಾರ್ಡ್ ಸಂಖ್ಯೆ – 145
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಅಧ್ಯಕ್ಷರು ಹಾಗೂ
ನೋಡಲ್ ಅಧಿಕಾರಿ
ವಾರ್ಡ್ ಸಂಖ್ಯೆ – 145
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

<u>ಪ್ರತಿಯನ್ನು:-</u>

1) ಮಾನ್ಯ ಆಡಳಿತಗಾರರು ರವರ ಅವಗಾಹನೆಗೆ ತರಲು ಆಪ್ತಶಾಖೆಗೆ ಕಳುಹಿಸಿದೆ.
2) ಮಾನ್ಯ ಆಯುಕ್ತರು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆರವರ ಅವಗಾಹನೆಗೆ ತರಲು ಆಪ್ತಶಾಖೆಗೆ ಕಳುಹಿಸಿದೆ.
3) ಮಾನ್ಯ ವಲಯ ಆಯುಕ್ತರುರವರ ಅವಗಾಹನೆಗೆ ತರಲು ಆಪ್ತಶಾಖೆಗೆ ಕಳುಹಿಸಿದೆ.
4) ಮಾನ್ಯ ಜಂಟಿ ಆಯುಕ್ತರು (ದಕ್ಷಿಣ)ರವರ ಅವಗಾಹನೆಗೆ ತರಲು ಆಪ್ತಶಾಖೆಗೆ ಕಳುಹಿಸಿದೆ.
5) ತಂಡದ ಎಲ್ಲಾ ಸಿಬ್ಬಂಧಿರವರಿಗೆ ಮುಂದಿನ ಸೂಕ್ತ ಕ್ರಮಕ್ಕಾಗಿ.
6) ಕಛೇರಿ ಕಡತಕ್ಕೆ.

Scanned with CamScanner